# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಆಯುಕ್ತರವರ ಕಛೇರಿ, ನ.ರಾ ಚೌಕ, ಬೆಂಗಳೂರು-02

ಸಂಖ್ಯೆ:ಕ.ಅ/ಕೇಂ.ಕ/ಪಿ.ಆರ್/372/15-16 ದಿನಾಂಕ:05/01/2016

### ಕಛೇರಿ ಆಧೇಶ

**ವಿಷಯ:** 2015-16ನೇ ಸಾಲಿನ ಕಲ್ಯಾಣ ವಿಭಾಗದ ಅನುದಾನ ಹಂಚಿಕೆ ಮತ್ತು ಕ್ರಿಯಾಯೋಜನೆಯ ಅನುಮೋದನೆ ಕುರಿತು.

**ಉಲ್ಲೇಖ:**
1. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ವಿಷಯದ ಸಂಖ್ಯೆ:ತೆಆಸ್ಥಾಸ/130/2014-15, ದಿ:12-03-2015.
2. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ:459/2014-15 ದಿನಾಂಕ:12-03-2015ರಂದು ಅನುಮೋದಿಸಿ, ತಿದ್ದುಪಡಿ ಮಾಡಿ ತೀರ್ಮಾನಿಸಿರುವಂತೆ, ಮಾನ್ಯ ಆಡಳಿತಗಾರರ ಅನುಮೋದನೆ ನಡವಳಿ ವಿಷಯ ಸಂಖ್ಯೆ: 61/2015-16 ದಿನಾಂಕ:15-05-2015 ಹಾಗೂ ಸರ್ಕಾರದ ಆದೇಶ ಸಂಖ್ಯೆ:ನ.ಅ.ಇ./608/ಎಂಎನ್‌ಯು/2015 ದಿನಾಂಕ:29-05-2015.
3. ಆಯುಕ್ತರು ರವರ ಟಿಪ್ಪಣಿ ಸಂಖ್ಯೆ:ಕ.ಅ/ಕೇಂ.ಕ/ಪಿಆರ್/372/15-16 ದಿನಾಂಕ:10/09/2015
4. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿ:17-10-2015 ರಂದು ನಡೆದ ಸಭೆಯ ನಡವಳಿಗಳ ವಿಷಯದ ಸಂಖ್ಯೆ:ಸಾ.ನ್ಯಾ.ಸ್ಥಾ.ಸ/17/2015-16.
5. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮಂಡಿಸಿರುವ ವಿಶೇಷ ಆಯುಕ್ತರು (ಕಲ್ಯಾಣ) ರವರ ಟಿಪ್ಪಣಿ ಸಂಖ್ಯೆ:ಕ.ಅ/ಕೇಂ.ಕ/ಪಿಆರ್/372/15-16 ದಿನಾಂಕ:06/11/2015
6. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯ ಸಂಖ್ಯೆ:ತೆಆಸ್ಥಾಸ/09/2015-16 ದಿನಾಂಕ:23/11/2015

******

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂದಿಸಿದಂತೆ, 2015-16 ನೇ ಸಾಲಿನ ಆಯವ್ಯಯದಲ್ಲಿ ಕಲ್ಯಾಣ ಕಾರ್ಯಕ್ರಮಗಳು ಮತ್ತು ಕಾಮಗಾರಿಗಳ ಲೆಕ್ಕ ಶೀರ್ಷಿಕೆಯಡಿಲ್ಲಿನ ನಿಗಧಿಪಡಿಸಲಾದ ಅನುಧಾನವನ್ನು ಹಂಚಿಕೆ ಮತ್ತು ಕ್ರಿಯಾಯೋಜನೆ ಸಂಬಂಧ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಉಲ್ಲೇಖ(3) ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ (5) ರಂತೆ ಕಡತ ಮಂಡಿಸಲಾಗಿದ್ದು, ಸಮಿತಿಯು ಉಲ್ಲೇಖ (4) ಮತ್ತು (6) ರಂತೆ ನಿರ್ಣಯ ಕೈಗೊಂಡು ಅನುಮೋದನೆ ನೀಡಿರುತ್ತದೆ. ಅದರಂತೆ ಈ ಕೆಳಕಂಡಂತೆ ಕ್ರಮವಹಿಸಲು ಆದೇಶಿಸಿದೆ.

## ಕಲ್ಯಾಣ ಕಾರ್ಯಕ್ರಮಗಳು:-

ದಿನಾಂಕ:17/10/2015 ರಂದು ನಡೆದಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯಲ್ಲಿ ಹಾಗು ದಿನಾಂಕ:23/11/2015 ರಂದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯಲ್ಲಿ ಅನುಮೋದನೆಯಂತೆ 2015–16ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಅನುಮೋದಿಸಲಾದ ವಿವಿಧ ಕಾರ್ಯಕ್ರಮಗಳ ಪಟ್ಟಿ ಈ ಕೆಳಕಂಡಂತೆ ಇರುತ್ತದೆ.

### ಅ) ಶೇ.24.10ರಡಿಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು:-

### 1.ವ್ಯಕ್ತಿಗತ ಸೌಲಭ್ಯಗಳಿಗೆ ಸಹಾಯ ಧನ ನೀಡುವ ಕಾರ್ಯಕ್ರಮಗಳು ಪಿ-ಕೋಡ್-2020 :

ಪಿ-ಕೋಡ್-2020 ರಡಿಯಲ್ಲಿ ರೂ.1000.00 ಲಕ್ಷಗಳ ಅನುಧಾನ ನಿಗದಿ ಪಡಿಸಿದ್ದು ಅನುಸೂಚಿತ ಜಾತಿ & ಅನುಸೂಚಿತ ಪಂಗಡಗಳಿಗೆ ವಾರ್ಡ್‌ವಾರು ಜನಸಂಖ್ಯೆ ಆದಾರದ ಮೇರೆಗೆ ಅನುಧಾನ ವನ್ನು ಅನುಬಂಧ-01 ಕಲಂ-08 ಮತ್ತು 13 ರಲ್ಲಿ ತಿಳಿಸಿರುವ ಹಾಗೆ ಈ ಕೇಳಕಂಡ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಲಾಗಿದೆ.

| ಕ್ರ.ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೌರಕಾರ್ಮಿಕರು ಹಾಗೂ ಕಡಿಮೆ ವರಮಾನವುಳ್ಳ ಗ್ರೂಪ್ ಡಿ ನೌಕರರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಧನ ಸಹಾಯ<br>Financial Support to PK's & Low income earning group "D" Employees of BBMP for Higher Education |
| 2) | ಸರ್ಕಾರದ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳ ಪ್ರವೇಶ ಶುಲ್ಕ, ಭೋದನಾ ಶುಲ್ಕ, ಪರೀಕ್ಷಾ ಶುಲ್ಕದ ಮರುಪಾವತಿ ಮತ್ತು ನೋಟ್ ಪುಸ್ತಕಗಳು, ಲೇಖನ ಸಾಮಾಗ್ರಿಗಳು, ಸಮವಸ್ತ್ರ ಹಾಗೂ ಇತ್ಯಾದಿಗಳ ಖರೀದಿಯ ಮರುಘಪಾವತಿ.<br>Reimbursement of Admission fees, Tuition fees, Examination fees and expenditure made towards the purchase of Note Books, Stationeries, Uniform and Learning Aids for pre-metric students in Govt. schools (only in case where ever there is no Government schemes) |
| 3) | ಸರ್ಕಾರದ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ಪ್ರವೇಶ ಶುಲ್ಕ, ಭೋದನಾ ಶುಲ್ಕ, ಪರೀಕ್ಷಾ ಶುಲ್ಕದ ಮರುಪಾವತಿ ಮತ್ತು ನೋಟ್ ಪುಸ್ತಕಗಳು, ಲೇಖನ ಸಾಮಾಗ್ರಿಗಳು, ಸಮವಸ್ತ್ರ ಹಾಗೂ ಇತ್ಯಾದಿಗಳ ಖರೀದಿಯ ಮರುಪಾವತಿ.<br>Reimbursement of Admission fees, Tuition fees, Examination fees and expenditure made towards the purchase of Books, Stationeries, Uniform and Learning Aids for post– metric students in Govt. colleges (only in case where ever there is no Government schemes) |

| ಕ್ರ.ಸಂ | ಕಾರ್ಯಕ್ರಮಗಳ ವಿವರ |
|---|---|
| 4) | **ಪಾಲಿಕೆಯ ಪೌರಕಾರ್ಮಿಕ, ಗ್ಯಾಂಗ್ ಮ್ಯಾನ್ ಮತ್ತು ಮಾಲಿಗಳ ಮಕ್ಕಳಿಗೆ ಆರ್ದಿಕ ಸಹಾಯ**<br>Financial Assistance to Children of Pourakarmika's Gangmen & Malies of BBMP |
| 5) | ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ದಿಕ ಸ್ವಾವಲಂಬನೆ ಯೋಜನೆ-(ಅಭಿವೃದ್ಧಿ ನಿಗಮಗಳ/ಬ್ಯಾಂಕ್ ಸಾಲ ಪಡೆದ ಫಲಾನುಭವಿಗಳಿಗೆ ಶೇ.25 ರಷ್ಟು ಸಹಾಯ ಧನ)<br>Economic Support Programme for Unemployed youth–(25% Subsidy for self employment through Development Corporations/Bank Loan) |
| 6) | ಸಾರಥಿ ಯೋಜನೆಯಡಿ ಆಟೋ ರೀಕ್ಷಾಗಳನ್ನು ಕೊಳ್ಳಲು ಶೇ.25 ರಷ್ಟು ಸಹಾಯಧನ ನೀಡುವುದು<br>Economic Support Programme for Unemployed youth for purchase of passenger Auto under the Sarathi Scheme–(25% Subsidy for self employment through Development Corporations/Bank Loan) |
| 7) | ಪರಿಶಿಷ್ಟ ಜಾತಿ/ಪಂಗಡದ ವೃತ್ತಿನಿರತ ವಕೀಲರಿಗೆ ಕಾನೂನು ಪುಸ್ತಕಗಳನ್ನು ಖರೀದಿಸಲು ಪಾಲಿಕೆಯಿಂದ ಆರ್ದಿಕ ಸಹಾಯ ನೀಡುವುದು.<br>Financial Assisstance to purchase Law Books for SC/ST professional lawyer's |
| 8) | ಪದವಿ, ವೈದ್ಯಕೀಯ ಮತ್ತು ಇಂಜಿನಿಯರ್ ವೃತ್ತಿ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್‌ಗಳ ಖರೀದಿಗಾಗಿ ಆರ್ಥಿಕ ಸಹಾಯ.<br>Financial Assisstance to purchase Laptop for SC/ST Degree students, Medical and Engineer Degree students |

2. ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು (ವ್ಯಕ್ತಿಗತ) ಪಿ-ಕೋಡ್-2022

ಪಿ-ಕೋಡ್-2022 ರಡಿಯಲ್ಲಿ ರೂ.500.00 ಲಕ್ಷಗಳ ಅನುಧಾನ ನಿಗದಿ ಪಡಿಸಿದ್ದು ಅನುಸೂಚಿತ ಜಾತಿ & ಅನುಸೂಚಿತ ಪಂಗಡಗಳಿಗೆ ವಾರ್ಡ್‌ವಾರು ಜನಸಂಖ್ಯೆ ಆದಾರದ ಮೇರೆಗೆ ಅನುಧಾನ ವನ್ನು ಅನುಬಂಧ-01 ಕಲಂ-10 ಮತ್ತು 15 ರಲ್ಲಿ ತಿಳಿಸಿರುವ ಹಾಗೆ ಈ ಕೇಳಕಂಡ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಲಾಗಿದೆ.

| ಕ್ರ.ಸಂ | ಕಾರ್ಯಕ್ರಮಗಳ ವಿವರ |
|---|---|
| | ವಾಹನ ಚಾಲನ ತರಬೇತಿ Driving Training |

ಆಯುಕ್ತರು

## 3.ಸಮುದಾಯ ಸೌಲಭ್ಯಗಳಿಗೆ ಸಹಾಯ ಧನ ನೀಡುವ ಕಾರ್ಯಕ್ರಮಗಳು ಪಿ-ಕೋಡ್-2652

ಪಿ-ಕೋಡ್-2652 ರಡಿಯಲ್ಲಿ ರೂ.500.00 ಲಕ್ಷಗಳ ಅನುಧಾನ ನಿಗದಿ ಪಡಿಸಿದ್ದು ಅನುಸೂಚಿತ ಜಾತಿ & ಅನುಸೂಚಿತ ಪಂಗಡಗಳಿಗೆ ವಾರ್ಡ್‌ವಾರು ಜನಸಂಖ್ಯೆ ಆದಾರದ ಮೇರೆಗೆ ಅನುಧಾನ ವನ್ನು ಅನುಬಂಧ-01 ಕಲಂ-07 ಮತ್ತು 12 ರಲ್ಲಿ ತಿಳಿಸಿರುವ ಹಾಗೆ ಈ ಕೇಳಕಂಡ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಲಾಗಿದೆ.

| ಕ್ರ.ಸಂ. | ಕಾರ್ಯಕ್ರಮಗಳ ವಿವರ |
|---|---|
| 1) | ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದ ಆಡಳಿತ ಮಂಡಳಿ ನಡೆಸುವ ಶಾಲಾ ಸಂಸ್ಥೆಗಳು/ವಿದ್ಯಾರ್ಥಿ ನಿಲಯಗಳಿಗೆ ಅನುದಾನ<br>Grants to Educational Institutions/ Hostels run by SC/ST management |
| 2) | ಸಮಾಜ ಕಲ್ಯಾಣ ಇಲಾಖೆಯು ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳ ಅಭಿವೃದ್ಧಿ, ಹೆಚ್ಚುವರಿಯಾಗಿ ಕಟ್ಟಡ ನಿರ್ಮಾಣ ಹಾಗೂ ಹೊಸದಾಗಿ ವಿದ್ಯಾರ್ಥಿ ನಿಲಯಗಳ ಕಟ್ಟಡಗಳನ್ನು ನಿರ್ಮಿಸಲು<br>Construction of New Hostels, providing Additional accommodation & Improvements to SC/ST Hostels run by Social Welfare Department, GoK |
| 3) | ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಮತ್ತು ವ್ಯಕ್ತಿವಿಕಾಸ ಕಾರ್ಯಾಗಾರ ನಡೆಸಲು<br>Career guidance workshop & Workshop on Personality Development to Students |

## 4. ಇತರೆ ಕಾರ್ಯಕ್ರಮಗಳು (ವ್ಯಕ್ತಿಗತ ಮತ್ತು ಸಮುದಾಯ) ಪಿ-ಕೋಡ್-2023 :-

**ಪಿ-ಕೋಡ್-2023 ರಡಿಯಲ್ಲಿ ರೂ.1000.00 ಲಕ್ಷಗಳ ಅನುಧಾನ ನಿಗದಿ ಪಡಿಸಿದ್ದು ಅನುಸೂಚಿತ ಜಾತಿ & ಅನುಸೂಚಿತ ಪಂಗಡಗಳಿಗೆ ವಾರ್ಡ್‌ವಾರು ಜನಸಂಖ್ಯೆ ಆದಾರದ ಮೇರೆಗೆ ಅನುಧಾನ ವನ್ನು ಅನುಬಂಧ-01 ಕಲಂ-09 ಮತ್ತು 14 ರಲ್ಲಿ ತಿಳಿಸಿರುವ ಹಾಗೆ ಈ ಕೇಳಕಂಡ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಲಾಗಿದೆ.**

| ಕ್ರ.ಸಂ | **ಕಾರ್ಯಕ್ರಮಗಳ ವಿವರ** |
|---|---|
| 1) | ಹೊಲಿಗೆ ತರಭೇತುದಾರರಿಗೆ ಶಿಷ್ಯ ವೇತನ (ಸ್ಟೈಫಂಡ್)<br>Stipend to Tailoring/ Knitting/ Embroidery / Coir training Trainees |
| 2) | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯೋಗಸ್ಥ ಮಹಿಳೆಯರಿಗೆ ಹೊಸದಾಗಿ ಹಾಸ್ಟೆಲ್‌ಗಳನ್ನು ನಿರ್ಮಿಸಲು.<br>Grants for construction of working women's hostels for SC/ST |

ಆಯುಕ್ತರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| ಕ್ರ.ಸಂ | ಕಾರ್ಯಕ್ರಮಗಳ ವಿವರ |
|---|---|
| 3) | ವೈದ್ಯಕೀಯ ಸಹಾಯ / ಸೇವೆಗಳು, ಧೌರ್ಜನ್ಯ, ನೈಸರ್ಗಿಕ ವಿಕೋಪಗಳಲ್ಲಿ ಬಲಿಯಾದವರಿಗೆ ಹಾಗೂ ಗಂಭೀರ ಸ್ವರೂಪದ ಕಾಯಿಲೆಗಳಿಂದ ಭಳಲುತ್ತಿರುವವರಿಗೆ ಆರ್ಥಿಕ ಸಹಾಯ<br>Medical Aid/Services to Victims of Riots, Natural Calamities and Financial Aid to the person's suffering from Chronic diseases |
| 4) | ಪೌರ ಕಾರ್ಮಿಕರು, ಗ್ಯಾಂಗ್‌ಮೆನ್ ಹಾಗೂ ಮಾಲಿಗಳ ಕಾಲೋನಿಗಳ ಅಭಿವೃದ್ಧಿಗಾಗಿ ಕಲ್ಯಾಣ ಕಾರ್ಯಕ್ರಮಗಳು.<br>Welfare programmes to Pourakarmika's Gangmen & BBMP gardeners for their colony development. |
| 5) | ಈಗಾಗಲೇ ರೂಪಿಸಿರುವ ಕಾರ್ಯಕ್ರಮಗಳನ್ನು ಹೊರತುಪಡಿಸಿ ಇತರೆ ಯಾವುದಾದರು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು.<br>Any Other useful scheme's programmes other than the above for the Economic Development of SC/ST's |
| 6) | ಪಾಲಿಕೆ ವ್ಯಾಪ್ತಿಯಲ್ಲಿ ವಾಸವಾಗಿರುವ ಸಫಾಯಿ ಕರ್ಮಚಾರಿಗಳ ಸಮೀಕ್ಷೆಯನ್ನು ನಡೆಸಲು.<br>Survey of Safai Karmacharis in Palike limits. |
| 7) | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನಸಾಂದ್ರಿತ ಪ್ರದೇಶಗಳಲ್ಲಿ ಗ್ರಂಥಾಲಯಗಳ ನಿರ್ಮಾಣ ಮತ್ತು ನಿರ್ವಹಣೆ,<br>Construction and Maintenance of Libraries in Areas Predominantly Populated by Scheduled Caste/Scheduled Tribe. |
| 8) | ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಸಮುದಾಯದ ವೃತ್ತಿ ನಿರತರಿಗೆ ಹಾಗೂ ಅವರು ತೊಡಗಿರಬಹುದಾದ ವಿವಿಧ ವೃತ್ತಿ ನಿರತರಿಗೆ ಅವರವರ ಕಸಬುಗಳಿಗೆ ಆರ್ಥಿಕ ಸಹಾಯ (ಚಮ್ಮಾರ/ಪ್ಲಂಬರ್/ಎಲೆಕ್ಟ್ರಿಷಿಯನ್/ಇತ್ಯಾದಿ)<br>Economic Support Programme for SC & ST Community for their Professional Needs |

ಆ) ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು

1) ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು:-ಪಿ-ಕೋಡ್-1936 ಮತು ಆರ್ಥಿಕ ಹಿಂದುಳಿದ ವರ್ಗ ಪಿ-ಕೋಡ್-2337

**ಪಿ-ಕೋಡ್-1936 ರಡಿಯಲ್ಲಿ ರೂ.1000.00 ಲಕ್ಷಗಳ ಅನುಧಾನವನ್ನು ನಿಗದಿಪಡಿಸಿದ್ದು ಪ್ರತಿ ವಾರ್ಡ್‌ಗೆ ರೂ.5.05 ಲಕ್ಷಗಳ ಹಾಗೆ ಎಲ್ಲಾ ವಾರ್ಡ್‌ಗಳಿಗೆ ಸಮನಾಂತರವಾಗಿ ಮತ್ತು ಪಿ-ಕೋಡ್-2337 ರಡಿಯಲ್ಲಿ ರೂ.500.00 ಲಕ್ಷಗಳನ್ನು ನಿಗದಿಪಡಿಸಿದ್ದು ಪ್ರತಿ ವಾರ್ಡ್‌ಗೆ**

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರೂ.2.53 ಲಕ್ಷಗಳ ಹಾಗೆ ಎಲ್ಲಾ ವಾರ್ಡ್‌ಗಳಿಗೆ ಸಮನಾಂತರವಾಗಿ ವಾರ್ಡ್‌ವಾರು ಅನುಧಾನವನ್ನು ಅನುಬಂಧ-02 ರಲ್ಲಿ ತಿಳಿಸಿರುವ ಹಾಗೆ ಈ ಕೇಳಕಂಡ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಲಾಗಿದೆ.**

| ಕ್ರ.ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ವಾಹನ ಚಾಲನ ತರಬೇತಿ.<br>Driving Training |
| 2) | ಹಿಂದುಳಿದ ವರ್ಗಗಳ ಸಮುದಾಯದ ವೃತ್ತಿ ನಿರತರಿಗೆ ಅವರವರ ಕಸಬುಗಳಿಗೆ ಆರ್ದಿಕ ಸಹಾಯ (ದೋಬಿ/ಸವಿತಾ ಸಮಾಜ/ಕಮ್ಮಾರ/ವಿಶ್ವಕರ್ಮ/ಬಡಗಿ/ಕುಂಬಾರ/ಇತ್ಯಾದಿ)<br>Economic Support Programme for Backward Classes Community for their Professional Needs |
| 3) | ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ದಿಕ ಸ್ವಾವಲಂಬನೆ ಯೋಜನೆ (ವಾಹನ ಖರೀದಿ ಮತ್ತು ಸ್ವಯಂ ಉದ್ಯೋಗ)<br>Economic Support Programme for Unemployed Youths |
| 4) | ಉನ್ನತ ವ್ಯಾಸಂಗದಲ್ಲಿರುವ ಕಾಲೇಜು ವಿದ್ಯಾರ್ದಿಗಳ ಶುಲ್ಕಗಳ ಮರುಪಾವತಿ.<br>Re-Imbursement of College Fees for Higher Education |
| 5) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೌರಕಾರ್ಮಿಕರು ಹಾಗೂ ಕಡಿಮೆ ವರಮಾನವುಳ್ಳ ಗ್ರೂಫ್ ಡಿ ನೌಕರರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಧನ ಸಹಾಯ.<br>Higher Education Financial support to Pourakarmikas & low income earning Group 'D" Employees of BBMP |
| 6) | ಸಾರಥಿ ಯೋಜನೆಯಡಿ ಆಟೋ ರೀಕ್ಷಾಗಳನ್ನು ಕೊಳ್ಳಲು ಶೇ.25 ರಷ್ಟು ಸಹಾಯಧನ ನೀಡುವುದು<br>Economic Support Programme for Unemployed youth for purchase of passenger Auto under the Sarathi Scheme–(25% Subsidy for self employment through Development Corporations/Bank Loan) |
| 7) | ವೃತ್ತಿ ಶಿಕ್ಷಣ ವ್ಯಾಸಂಗ, ಪದವಿ ಮತ್ತು ಪದವಿ ಪೂರ್ವ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್‌ಗಳ ಖರೀದಿಗಾಗಿ ಆರ್ಥಿಕ ಸಹಾಯ<br>Financial Assisstance to purchase Laptop for Backward & Minority Classes Community Degree students, Medical and Engineer Degree students |

ಆಯುಕ್ತರು

**ಇ) ರಾತ್ರಿ ತಂಗುದಾಣಗಳ ನಿರ್ಮಾಣ ಮತ್ತು ನಿರ್ವಹಣೆ ಪಿ-ಕೋಡ್2583:-**

ಪಿ-ಕೋಡ್-2583 ರಡಿಯಲ್ಲಿ ರೂ.100.00 ಲಕ್ಷಗಳ ಅನುಧಾನವನ್ನು ನಿಗದಿಪಡಿಸಿದ್ದು ಪ್ರತಿ ವಲಯಕ್ಕೆ ರೂ.12.50 ಲಕ್ಷಗಳ ಹಾಗೆ ಎಲ್ಲಾ ವಲ್ಯಯಗಳಿಗೆ ಸಮನಾಂತರವಾಗಿ ಅನುಧಾನವನ್ನು ಅನುಬಂಧ-02 ರಲ್ಲಿ ತಿಳಿಸಿರುವ ಹಾಗೆ ಈ ಕೇಳಕಂಡ ಕಾರ್ಯಕ್ರಮಕ್ಕೆ ಹಂಚಿಕೆ ಮಾಡಲಾಗಿದೆ.

| ಕ್ರ.ಸಂ | ಪಿ-ಕೋಡ್ | ಕಾರ್ಯಕ್ರಮಗಳು |
|---|---|---|
| 1 | 2583 | ರಾತ್ರಿ ತಂಗುದಾಣಗಳ ನಿರ್ಮಾಣ ಮತ್ತು ನಿರ್ವಹಣೆ<br>Construction & Maintenance of Night Shelters |

ಈ) ಮಹಿಳಾ ಕಲ್ಯಾಣ ಕಾರ್ಯಕ್ರಮಗಳು:- ಪಿ-ಕೋಡ್-1937

ಪಿ-ಕೋಡ್-1937 ರಡಿಯಲ್ಲಿ ರೂ.600.00 ಲಕ್ಷಗಳ ಅನುಧಾನವನ್ನು ನಿಗದಿಪಡಿಸಿದ್ದು ಪ್ರತಿ ವಾರ್ಡ್‌ಗೆ ರೂ.3.03 ಲಕ್ಷಗಳ ಹಾಗೆ ಎಲ್ಲಾ ವಾರ್ಡ್‌ಗಳಿಗೆ ಸಮಾನಾಂತರವಾಗಿ ಅನುಧಾನವನ್ನು ಅನುಬಂಧ-02 ರಲ್ಲಿ ತಿಳಿಸಿರುವ ಹಾಗೆ ಈ ಕೇಳಕಂಡ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಲಾಗಿದೆ.

| ಕ್ರ.ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಹೊಲಿಗೆ/ನಿಟ್ಟಿಂಗ್/ಎಂಬ್ರಾಯಿಡರಿ/ಕಾಯರ್/ ತರಬೇತಿ ಶಿಕ್ಷಕರು / ಮೇಲ್ವಿಚಾರಕರು / ದುರಸ್ಥಿಗಾರರಿಗೆ ಸಿಬ್ಬಂದಿಗಳಿಗೆ ಗೌರವ ಧನ.<br>Honorarium to Tailoring/ Knitting/ Embroidery / Coir training centres staff |
| 2) | ಹೊಲಿಗೆ/ ನಿಟ್ಟಿಂಗ್/ ಎಂಬ್ರಾಯಿಡರಿ /ಕಾಯರ್/ ಖಾಸಗಿ ಕಟ್ಟಡಗಳ ತರಬೇತಿ ಕೇಂದ್ರಗಳ ಬಾಡಿಗೆ<br>M & R to Tailoring/ Knitting/ Embroidery / Coir training centres |
| 3) | ಹೊಲಿಗೆ/ ನಿಟ್ಟಿಂಗ್/ ಎಂಬ್ರಾಯಿಡರಿ /ಕಾಯರ್/ ತರಬೇತಿ ಕೇಂದ್ರಗಳಲ್ಲಿ ಉಪಕರಣಗಳ ನಿರ್ವಹಣೆ ಮತ್ತು ದುರಸ್ತಿ<br>Rent for Tailoring/ Knitting/ Embroidery / Coir training centres |
| 4) | ಟೈಲರಿಂಗ್/ನಿಟ್ಟಿಂಗ್/ ಎಂಬ್ರಾಯಿಡರಿ/ಕಾಯರ್ ತರಬೇತಿದಾರರಿಗೆ ಶಿಷ್ಯ ವೇತನ.<br>Stipend to Tailoring/ Knitting/ Embroidery / Coir training Trainees |
| 5) | ಹೊಲಿಗೆ ತರಬೇತಿ ಕೇಂದ್ರಗಳಿಗೆ ಹೊಲಿಗೆ ಯಂತ್ರಗಳನ್ನು ಒದಗಿಸಲು ಹಾಗೂ ಹಾಲಿ ಕೇಂದ್ರಗಳಿಗೆ ಉಪಕರಣ ಗಳನ್ನು ಒದಗಿಸಲು.<br>Supply of Tailoring Machines to Centres & Supply of Furnitures & Materials to Existing Training Centres |

ಆಯುಕ್ತರು

## ಉ) ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳು:- ಪಿ-ಕೋಡ್-1938

**ಪಿ-ಕೋಡ್-1938 ಅಡಿಯಲ್ಲಿ ರೂ.400.00 ಲಕ್ಷಗಳ ಅನುಧಾನವನ್ನು ನಿಗದಿಪಡಿಸಿದ್ದು ಪ್ರತಿ ವಾರ್ಡ್‌ಗೆ ರೂ.2.02 ಲಕ್ಷಗಳ ಹಾಗೆ ಎಲ್ಲಾ ವಾರ್ಡ್‌ಗಳಿಗೆ ಸಮಾನಾಂತರವಾಗಿ ಅನುಧಾನವನ್ನು ಅನುಬಂಧ-02 ರಲ್ಲಿ ತಿಳಿಸಿರುವ ಹಾಗೆ ಈ ಕೇಳಕಂಡ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಲಾಗಿದೆ.**

| ಕ್ರ.ಸಂ. | ಕಾರ್ಯಕ್ರಮಗಳ ವಿವರ |
|---|---|
| 1) | ಮಾನಸಿಕ ಅಸ್ವಸ್ತರಿಗೆ ಧನಸಹಾಯ ಧನ<br>Incentive Scheme for Mentally Challenged |
| 2) | ವಿಕಲಚೇತನರಿಗೆ ಸೇವಾ ಕೇಂದ್ರಗಳು ಪ್ರಾರಂಭಿಸಲು (ಸ್ವಯಂ ಸೇವಾ ಸಂಸ್ಥೆಗಳೊಂದಿಗೆ)<br>Opening of Service centers (Through NGO's) |
| 3) | ವಿಕಲಚೇತನರಿಗೆ ವಿವಿಧ ಉಪಕರಣಗಳನ್ನು ಒದಗಿಸಲು ಮತ್ತು ಹೆಚ್ಚುವರಿ ಚಕ್ರ ಅಳವಡಿಸಿರುವ ದ್ವಿಚಕ್ರ ಮೋಟಾರ್ ವಾಹನ ವಿತರಣೆ.<br>Supply of equipments to Physically challenged and Motorized Two Wheeler |
| 4) | ಪಾಲಿಕೆ ವ್ಯಾಪ್ತಿಯಲ್ಲಿನ ವಿಕಲಚೇತನರ ಸಮೀಕ್ಷೆ ಮಾಡುವುದು.<br>Survey of Physically Challenged in Palike Limits |

## ಊ) ಸಾಮಾನ್ಯ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು:-ಪಿ-ಕೋಡ್-2956 :

**ಪಿ-ಕೋಡ್-2956 ಅಡಿಯಲ್ಲಿ ರೂ. 200.00 ಲಕ್ಷಗಳ ಅನುಧಾನವನ್ನು ನಿಗದಿಪಡಿಸಿದ್ದು ಪ್ರತಿ ವಾರ್ಡ್‌ಗೆ ರೂ. 1.01 ಲಕ್ಷಗಳ ಹಾಗೆ ಎಲ್ಲಾ ವಾರ್ಡ್‌ಗಳಿಗೆ ಸಮಾನಾಂತರವಾಗಿ ಅನುಧಾನವನ್ನು ಅನುಬಂಧ-02 ರಲ್ಲಿ ತಿಳಿಸಿರುವ ಹಾಗೆ ಈ ಕೇಳಕಂಡ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಲಾಗಿದೆ.**

| ಕ್ರ.ಸಂ | ಕಾರ್ಯಕ್ರಮಗಳು |
|---|---|
| 1) | ಹಿರಿಯ ನಾಗರಿಕರಿಗೆ ಮದ್ಯಾಹ್ನದ ಬಿಸಿ ಊಟದ ಕಾರ್ಯಕ್ರಮ/ವೈದ್ಯಕೀಯ ಸೇವೆ<br>Mid Day Meals / Medical Help to Senior Citizens |
| 2) | ಹಿರಿಯ ನಾಗರಿಕರಿಗೆ ಸೌಲಭ್ಯ ಕೇಂದ್ರ (ಸ್ವಯಂ ಸೇವಾ ಸಂಸ್ಥೆಗಳೊಂದಿಗೆ)<br>Day Care Centres for Senior Citizens (through NGOs) |
| 3) | ಹಿಜ್ಡಿಡಾ/ಲೈಂಗಿಕ ಕಾರ್ಯಕರ್ತರು ಹಾಗೂ ಇತರೆ ವರ್ಗದವರಿಗೆ ಸಹಾಯ (ಸ್ವಯಂಸೇವಾ ಸಂಸ್ಥೆಗಳೊಂದಿಗೆ)<br>Financial Assistance to Sexual Minorities / Sex Workers & others (Through NGOs) |
| 4) | ಎಲೆಕ್ಟ್ರಿಕಲ್ ವೈರ್‌ಮ್ಯಾನ್ ತರಬೇತಿ ಕೇಂದ್ರದ ಸಿಬ್ಬಂದಿಗಳಿಗೆ ಗೌರವ ಸಂಭಾವನೆ ಪಾವತಿಸಲು |

| | |
|---|---|
| | (ಪೂರ್ವ ವಲಯಕ್ಕೆ ಮಾತ್ರ)<br>Honorarium to Electrical Wiremen Training Center Staff |
| 5) | ಎಲೆಕ್ಟ್ರಿಕಲ್ ವೈರ್‌ಮ್ಯಾನ್ ತರಬೇತಿ ಕೇಂದ್ರಕ್ಕೆ ಉಪಕರಣಗಳ ಸರಬರಾಜು (ಪೂರ್ವ ವಲಯಕ್ಕೆ ಮಾತ್ರ)<br>Supply of Materials to Electrical Wiremen Training Centre |
| 6) | ಶಿಷ್ಯ ವೇತನ-ಎಲೆಕ್ಟ್ರಿಕಲ್ ವೈರ್‌ಮ್ಯಾನ್ ತರಬೇತುದಾರರಿಗೆ (ಪೂರ್ವ ವಲಯಕ್ಕೆ ಮಾತ್ರ)<br>Stipend to Electrical Wiremen Trainees |
| 7) | ಸಂಸ್ಕಾರ ಯೋಜನೆಯಡಿ ಅಂತ್ಯ ಸಂಸ್ಕಾರದ ಸಮಯದಲ್ಲಿ ಸಹಾಯಕರಾಗಿ ನೆರವಾಗುತ್ತಿರುವ ಬಡ ಕುಟುಂಬದ ಸರ್ವತೋಮುಖ ಅಭಿವೃದ್ಧಿಗೆ ಆರ್ಥಿಕ ಸಹಾಯ ನೀಡುವುದು |
| 8) | ಮಾಹಿತಿ, ಶಿಕ್ಷಣ ಹಾಗೂ ಸಂಪರ್ಕ ಕಾರ್ಯಕ್ರಮ.<br>Information, Education and Communication Programme. |

## ಕಲ್ಯಾಣ ಕಾರ್ಯಕ್ರಮಗಳು

1) 2015-16ನೇ ಸಾಲಿನ ಆಯವ್ಯಯ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಕಲ್ಯಾಣ ಕಾರ್ಯಕ್ರಮಗಳ ವಿವಿಧ ಲೆಕ್ಕಶೀರ್ಷಿಕೆಯಡಿ ನಿಗಧಿಪಡಿಸಿರುವ ಶೇ.24.10%ರ ಅನುದಾನವನ್ನು ಪಾಲಿಕೆ ವ್ಯಾಪ್ತಿಯಲ್ಲಿನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ಜನ ಸಂಖ್ಯೆಗೆ ಅನುಗುಣವಾಗಿ ಹಂಚಿಕೆ ಮಾಡುವುದು ಮತ್ತು ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗ, ಮಹಿಳಾ ವರ್ಗ, ವಿಕಲಚೇತನರು ಮತ್ತು ಸಾಮಾನ್ಯ ವರ್ಗದ ಕಲ್ಯಾಣ ಕಾರ್ಯಕ್ರಮಗಳ ಅನುದಾನವನ್ನು ಸಮನಾಂತರವಾಗಿ ವಾರ್ಡ್‌ವಾರು ಹಂಚಿಕೆ ಮಾಡಿ ಅನುಬಂಧ-01 ಮತ್ತು 2ಕ್ಕೆ ಅನುಮೋದನೆ ನೀಡಿರುತ್ತದೆ. ಅದರಂತೆ ಪಟ್ಟಿಯನ್ನು **ಅನುಬಂಧ-1 ಮತ್ತು 2 ರಲ್ಲಿ ಲಗತ್ತಿಸಿದ್ದು ತಮ್ಮ ವಲಯದ ವಿವಿದ ವಾರ್ಡ್‌ಗಳಿಗೆ ವಿವಿದ ವರ್ಗಾವಾರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗದ, ಮಹಿಳಾ ಕಲ್ಯಾಣ ಕಾರ್ಯಕ್ರಮ ಹಾಗೂ ವಿಕಲಚೇತನರು ಮತ್ತು ಸಾಮಾನ್ಯ ವರ್ಗದವರ) ಲಭ್ಯವಾಗುವ ಅನುದಾನದ ಮಿತಿಗೊಳಪಟ್ಟು ಕಲ್ಯಾಣ ಕಾರ್ಯಕ್ರಮಗಳ ಕ್ರಿಯಾಯೋಜನೆ ಸಿದ್ಧಪಡಿಸತಕ್ಕದ್ದು.**

2) 2015-16ನೇ ಸಾಲಿನ ಕಾರ್ಯಕ್ರಮಗಳನ್ನು ಆರ್ಥಿಕ ವರ್ಷದಲ್ಲಿಯೇ ಅನುಷ್ಠಾನ ಗೊಳಿಸಲು ಹಾಗೂ ಹಲವು ಕಲ್ಯಾಣ ಕಾರ್ಯಕ್ರಮಗಳ ಲೆಕ್ಕಶೀರ್ಷಿಕೆಯಲ್ಲಿ ಕಡಿಮೆ ಅನುದಾನ ಲಭ್ಯವಿರುವ ಹಿನ್ನೆಲೆಯಲ್ಲಿ ಕಾಲಾವಧಿಯೊಳಗೆ ಫಲಾನುಭವಿಗಳಿಗೆ ಬೇಡಿಕೆಯಿರುವ ಮತ್ತು ಶೀಘ್ರವಾಗಿ ಅನುಷ್ಠಾನವಾಗುವಂತ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕೆಲವು ಕಾರ್ಯಕ್ರಮಗಳನ್ನು ತಾತ್ಕಾಲಿಕವಾಗಿ ಕೈಬಿಡಲಾಗಿದೆ. ಪ್ರಸಕ್ತ ಸಾಲಿಗೆ



ಆಯುಕ್ತರು

ಆಯೋಜಿಸಲಾದ ಕಾರ್ಯಕ್ರಮಗಳೊಂದಿಗೆ ಅನುಷ್ಠಾನಗೊಳಿಸಲು ತೀರ್ಮಾನಿಸಿದ್ದು, ಅದರಂತೆ 2015–16ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಸದರಿ ಕಾರ್ಯಕ್ರಮಗಳಿಗೆ ಕ್ರಿಯಾಯೋಜನೆ ಸಿದ್ದಪಡಿಸುವುದು.

3) ಅನುಸೂಚಿತ ಜಾತಿ/ಅನುಸೂಚಿತ ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗ, ಮಹಿಳಾ ವರ್ಗ, ವಿಕಲಚೇತನ ಹಾಗೂ ಸಾಮಾನ್ಯ ವರ್ಗದವರ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿಟ್ಟಿರುವ ಅನುದಾನಕ್ಕೆ ಅರ್ಜಿಗಳನ್ನು 2015–16ನೇ ಸಾಲಿನಲ್ಲಿ ಆಹ್ವಾನಿಸಿ, ನಿಯಮಾನುಸಾರ ಮಾರ್ಗಸೂಚಿ ಅನ್ವಯ ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳುವುದು. ಅನುದಾನವನ್ನು ಯಾವುದೇ ರೀತಿ ಮರು ಹೊಂದಾಣಿಕೆ ಮಾಡದೆ ನ್ಯೂಸ್‌ಪೇಪರ್ ನೋಟಿಫಿಕೇಷನ್ ಕೆ.ಟಿ.ಪಿ.ಪಿ ಆಕ್ಟ್‌ರಂತೆ ಟೆಂಡರ್/ಅರ್ಜಿಗಳನ್ನು ಅಹ್ವಾನಿಸಿ ನಿಯಮಾನುಸಾರ ಮಾರ್ಗಸೂಚಿ ಅನ್ವಯ ಕರೆದು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯತಕ್ಕದ್ದು. ಮಾನ್ಯ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ಕಾರ್ಯಕ್ರಮಗಳ ಬಗ್ಗೆ ತಿಳುವಳಿಕೆ ನೀಡಲು ಜಂಟಿ ಆಯುಕ್ತರರವರ ಕಛೇರಿಯಲ್ಲಿ ಹೆಲ್ಪ್ ಡೆಸ್ಕ್ ನಿರ್ವಹಿಸುವುದು. ಅರ್ಜಿಗಳನ್ನು ಆಹ್ವಾನಿಸುವುದರೊಂದಿಗೆ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ, ಕಾಲಾವಕಾಶ ಕಡಿಮೆ ಇರುವ ಪ್ರಯುಕ್ತ ನಿಯಮಾನುಸಾರ ಕೆ.ಟಿ.ಪಿ.ಪಿ. ಆಕ್ಟ್‌ರಂತೆ ಟೆಂಡರ್ ಕರೆದು ಸಕ್ಷಮ ಪಾಧಿಕಾರದ ಅನುಮೋದನೆಯೊಂದಿಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.ಮೇಲೆ ಹೇಳಿದಂತೆ ವಾರ್ಡ್‌ವಾರು ಯಾವುದೇ ರೀತಿಯ ಮರು ಹೊಂದಾಣಿಕೆ ಮಾಡದೆ ಆ ವಾರ್ಡಿನಲ್ಲೇ ನಿಗಧಿತ ಅನುದಾನವನ್ನು ನಿಯಮಾನುಸಾರ ಕಾರ್ಯಕ್ರಮಗಳಿಗೆ ವೆಚ್ಚ ಮಾಡಬೇಕಾಗಿರುತ್ತದೆ. ನಿಗದಿತ ಅನುದಾನವನ್ನು ಆಯಾ ವರ್ಗದ ಫಲಾನುಭವಿಗಳಿಗೆ ಮತ್ತು ಆಯಾ ವರ್ಗದಲ್ಲಿ ನಿಗಧಿಪಡಿಸಿರುವ ಕಾರ್ಯಕ್ರಮಗಳಿಗೆ ಮಾತ್ರ ಅನುಷ್ಠಾನಗೊಳಿಸತ್ಕದ್ದು.

4) ಎಲ್ಲಾ ಕಾರ್ಯಕ್ರಮಗಳಿಗೆ ನ್ಯೂಸ್ ಪೇಪರ್ ಆಧಾರದ ಮೇಲೆ ಸ್ವೀಕರಿಸಲಾಗಿರುವ ಎಲ್ಲಾ ಅರ್ಜಿಗಳನ್ನು ಹಾಗೂ ಅಪರ/ಜಂಟಿ ಆಯುಕ್ತರ ಅಧ್ಯಕ್ಷತೆಯಲ್ಲಿ ವಲಯ ಕಲ್ಯಾಣ ಸಮಿತಿಯ ನಡವಳಿಗಳನ್ನು ಹಾಗೂ ನಿಯಮಾನುಸಾರ ಪರಿಶೀಲಿಸಿ ಪುರಸ್ಕೃತ ಹಾಗೂ ತಿರಸ್ಕೃತವಾಗಿರುವ ಎಲ್ಲಾ ಅರ್ಜಿಗಳ ವಿವರಗಳನ್ನು ಗಾರ್ಡ್ ರಿಜಿಸ್ಟರ್‌ನಲ್ಲಿ ನಿರ್ವಹಿಸತಕ್ಕದ್ದು. ಹಾಗೂ ಈ ಎಲ್ಲಾ ಮಾಹಿತಿಯನ್ನು ಬಿಬಿಎಂಪಿ ವೆಬ್‌ಸೈಟ್ ನಲ್ಲಿ ಹಾಗೂ ವಲಯ ಕಛೇರಿ ಹಾಗೂ ಎಲ್ಲಾ ವಾರ್ಡ್ ಕಛೇರಿಗಳಲ್ಲಿ ಸಾರ್ವಜನಿಕರ ಆಕ್ಷೇಪಣೆಗಳಿಗಾಗಿ ನೋಟಿಸ್ ಬೋರ್ಡ್‌ನಲ್ಲಿ ಪ್ರದರ್ಶಿಸತಕ್ಕದ್ದು. ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಸ್ವೀಕರಿಸಿ ಅದರ ನಿವಾರಣೆ ಬಗ್ಗೆ ವಲಯ ಮಟ್ಟದ ಕಲ್ಯಾಣ ಸಮಿತಿಯಲ್ಲಿ ನಿರ್ಣಯಿಸಿ ತದನಂತರ ನಿಯಮಾನುಸಾರ ಮುಂದಿನ ಕ್ರಮ ತೆಗೆದುಕೊಳ್ಳುವುದು ಹಾಗೂ ಸದರಿ ನಡವಳಿಯನ್ನು ಸಹ ಬಿಬಿಎಂಪಿ ವೆಬ್‌ಸೈಟ್ ಹಾಗೂ ನೋಟಿಸ್ ಬೋರ್ಡ್ ಮತ್ತು ವಲಯ ನೋಟಿಸ್ ಬೋರ್ಡ್‌ನಲ್ಲಿ ಪ್ರದರ್ಶಿಸತಕ್ಕದ್ದು.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

5) ಪ್ರತಿ ವರ್ಗ, ವಾರ್ಡ್ ಯೋಜನೆವಾರು ಪ್ರಗತಿ ವರದಿಯನ್ನು ಪ್ರತಿ ತಿಂಗಳು 3ನೇ ತಾರೀಖಿನೊಳಗೆ ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ವಲಯ ಆಯುಕ್ತರ ಮುಖಾಂತರ ವಿಶೇಷ ಆಯುಕ್ತರು (ಕಲ್ಯಾಣ/ಕಲ್ಯಾಣಾಧಿಕಾರಿಗಳು ಕೇಂದ್ರ ಕಛೇರಿರವರಿಗೆ ಮತ್ತು ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಿಶೇಷ ಆಯುಕ್ತರು (ಯೋಜನೆ)/ಪ್ರಧಾನ ಅಭಿಯಂತರರು ಹಾಗೂ ವಿಶೇಷ ಆಯುಕ್ತರು (ಕಲ್ಯಾಣ)ರವರ ಮಾಹಿತಿಗಾಗಿ ಪ್ರತಿಯನ್ನು ತಪ್ಪದೇ ಸಲ್ಲಿಸಲು ಆದೇಶಿಸಿದೆ. ಯಾವುದೇ ಪ್ರಗತಿ ಇಲ್ಲದಿದ್ದಲ್ಲಿ ಕಡ್ಡಾಯವಾಗಿ ಶೂನ್ಯ ಪ್ರಗತಿ ವರದಿ ಸಲ್ಲಿಸತಕ್ಕದ್ದು. ನಿಗಧಿತ ಸಮಯಕ್ಕೆ ಸರಿಯಾಗಿ ಪ್ರಗತಿ ವರದಿ ಸಲ್ಲಿಸದಿದ್ದಲ್ಲಿ ವಲಯ ಆಯಕ್ತರು / ಉಪ ಆಯುಕ್ತರು/ ಮುಖ್ಯ ಅಭಿಯಂತರರು ನೇರ ಹೊಣೆಗಾರರಾಗಿರುತ್ತಾರೆ.

6) ಮೇಲೆ ಹೇಳಿದಂತೆ ವಾರ್ಡ್‌ವಾರು ಮತ್ತು ವಲಯವಾರು ನಿಗದಿಪಡಿಸಿರುವ ಅನುದಾನವನ್ನು ಆಯಾ ವರ್ಗದ ಫಲಾನುಭವಿಗಳಿಗೆ ಮತ್ತು ಆಯಾ ವರ್ಗದಲ್ಲಿ ನಿಗಧಿಪಡಿಸಿರುವ ಪ್ರತಿ ಲೆಕ್ಕ ಶೀರ್ಷಿಕೆಯಡಿ ಲಭ್ಯ ಅನುದಾನವನ್ನು ಯಾವುದೇ ಕಲ್ಯಾಣ ಕಾರ್ಯಕ್ರಮಗಳಿಗೆ ಅನುಮೋದಿತ ವಲಯ ಕ್ರೀಯಾಯೋಜನೆಯಂತೆ ಉಪಯೋಗಿಸತಕ್ಕದ್ದು.

7) ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ವಾರ್ಡ್‌ವಾರು ಮತ್ತು ವಲಯವಾರು ಪ.ಜಾ ಮತ್ತು ಪ.ಪಂ ಮತ್ತು ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರು ಸಾಮಾನ್ಯ ವರ್ಗ, ವಿಕಲಚೇತನ, ಮಹಿಳಾ ಕಾರ್ಯಕ್ರಮಗಳು ಹಾಗೂ ಕಾಮಗಾರಿ ಯೋಜನೆಗಳಡಿಯಲ್ಲಿ ನಿಗಧಿಪಡಿಲಾಗಿರುವ ಅನುದಾನವನ್ನು ಅದೇ ವರ್ಗದ ಆಯಾ ಯೋಜನೆಗಳಿಗೆ ಮಾತ್ರ ಬಳಸಿಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೇ ಹೊರತು ಯಾವುದೇ ಕಾರಣ ಒಂದು ವರ್ಗದ ಲಭ್ಯ ಅನುಮೋದಿತ ಅನುದಾನವನ್ನು ಬೇರೆ ಯೋಜನೆ, ವಾರ್ಡ್, ವರ್ಗದ ಫಲಾನುಭವಿಗಳಿಗೆ ನೀಡುವಂತಿಲ್ಲ. ತಪ್ಪಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳೇ ನೇರ ಹೊಣೆಗಾರರಾಗಿರುತ್ತಾರೆ.

8) ಬಿಬಿಎಂಪಿ ಶಾಲೆಯಲ್ಲಿನ ಹೆಣ್ಣುಮಕ್ಕಳಿಗೆ ಸ್ವಚ್ಛತಾ ಕಿಟ್ ವಿತರಣೆ ಕಾರ್ಯಕ್ರಮವನ್ನು ಸರ್ಕಾರದ ಎನ್.ಯು. ಹೆಚ್.ಎಮ್ ಕಾರ್ಯಕ್ರಮದಲ್ಲಿ ಕೈಗೊಳ್ಳಲು ಜಂಟಿ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ) ವಿಭಾಗರವರು ಕ್ರಮವಹಿಸುವುದು.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**2. ಶೇ.24.10 % ರ ಅನುದಾನದಡಿ ಮನೆ ನಿರ್ಮಾಣ/ ಮೂಲಭೂತ ಸೌಕರ್ಯಗಳ ಕಾಮಗಾರಿಗಳಿಗೆ ನಿಗದಿಪಡಿಸಿರುವ ಅನುದಾನ**

(ರೂ ಲಕ್ಷಗಳಲ್ಲಿ)

| ಕ್ರ.ಸಂ | ಪಿ-ಕೋಡ್ | ಯೋಜನೆ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಒಟ್ಟು |
|---|---|---|---|---|---|
| 1 | 1878 | ಮೂಲಭೂತ ಸೌಕರ್ಯಗಳು (ಸಮುದಾಯ ಕಾರ್ಯಕ್ರಮ) | 1779.05 | 720.95 | 2500.00 |
| 2 | 2021 | ವಸತಿ ಸೌಲಭ್ಯಗಳು (ವ್ಯಕ್ತಿಗತ ಸೌಲಭ್ಯ) | 1423.24 | 576.76 | 2000.00 |

**ಶೇ. 24.10 ರಡಿಯಲ್ಲಿ ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡ ವರ್ಗದವರಿಗೆ ಕೈಗೊಳ್ಳುವ ಕಾಮಗಾರಿಗಳು:-**

**ಅ)ಮೂಲಭೂತ ಸೌಕರ್ಯಗಳು (ಸಮುದಾಯ ಕಾರ್ಯಕ್ರಮ) ಪಿ-ಕೋಡ್1878:-**

ಪಿ-ಕೋಡ್-1878 ರಡಿಯಲ್ಲಿ ರೂ.2500.00 ಲಕ್ಷಗಳ ಅನುಧಾನ ನಿಗದಿಪಡಿಸಿದ್ದು ಸದ'ರಿ ಅನುಧಾನವನ್ನು ಈ ಕೆಳಕಂಡ ಕಾರ್ಯಕ್ರಮಗಳಿಗೆ ವಾರ್ಡ್‌ವಾರು ಕಾಮಗಾರಿ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ ಸಾ.ನ್ಯ.ಸ್ಥಾ.ಸಮಿತಿಯ ಅನುಮೋದನೆಯೊಂದಿಗೆ ಅನುಷ್ಠಾನಗೊಳಿಸುವುದು.

| ಕ್ರ.ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ವೈಯುಕ್ತಿಕ ಶೌಚಾಲಯ ನಿರ್ಮಾಣ<br>Individual Toilets Construction |
| 2) | ಯು.ಜಿ.ಡಿ. ಮತ್ತು ನೀರಿನ ಸಂಪರ್ಕ ಪಡೆಯಲು ಸಹಾಯ ಧನ<br>Financial Assistance to U.G.D & Water connection |
| 3) | ಪರಿಶಿಷ್ಟ ಜಾತಿ/ಪಂಗಡದವರು ವಾಸಿಸುವ ಪ್ರದೇಶಗಳಲ್ಲಿ ರಸ್ತೆ ನಿರ್ಮಾಣ, ಚರಂಡಿ, ಬೀದಿ ದೀಪಗಳು ಅಳವಡಿಸುವುದು ಹಾಗೂ ಇತರೆ ಕಾಮಗಾರಿಗಳು.<br>Construction and Maintenance of Roads, Drainage, Street Lights, and Other Works in Areas Predominantly Populated by Scheduled Caste/Scheduled Tribe. |

ಆಯುಕ್ತರು

**ಆ) ವಸತಿ ಸೌಲಭ್ಯಗಳು (ವ್ಯಕ್ತಿಗತ ಸೌಲಭ್ಯ) ಪಿ-ಕೋಡ್2021:-**

ಪಿ-ಕೋಡ್-2021 ರಡಿಯಲ್ಲಿ ರೂ.2000.00 ಲಕ್ಷಗಳ ಅನುಧಾನ ನಿಗದಿಪಡಿಸಿದ್ದು ಸದರಿ ಅನುಧಾನವನ್ನು ಈ ಕೇಳಕಂಡ ಕಾರ್ಯಕ್ರಮಗಳಿಗೆ ವಾರ್ಡ್‌ವಾರು ಪ್ರತಿ ಒಂಟಿ ಮನೆ ಫಲಾನುಭವಿಗೆ ರೂ.3.00ಲಕ್ಷಗಳ ಸಹಾಯಧನದ ಆದಾರದ ಮೇರೆಗೆ ಹಾಗು ಉಳಿದ ಕಾರ್ಯಕ್ರಮಗಳಿಗೆ ನಿಯಮಾನುಸಾರ ಅಂದಾಜು ಮೇರೆಗೆ ವಾರ್ಡ್‌ವಾರು ಕಾಮಗಾರಿ ಕ್ರಿಯಾಯೋಜನೆಯನ್ನು ಸಿದ್ದಪಡಿಸಿ ಸಾ.ನ್ಯ.ಸ್ಥಾ.ಸಮಿತಿಯ ಅನುಮೊದನೆಯೊಂದಿಗೆ ಅನುಷ್ಠಾನಗೊಳಿಸುವುದು.

| ಕ್ರ.ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಪಕ್ಕಾ ಮನೆ ನಿರ್ಮಾಣ<br>Individual House Construction |
| 2) | ಕಚ್ಚಾ ಮನೆ ನಿರ್ಮಾಣ<br>Renovation of SC/ST Houses |
| 3) | ವಿ.ಎಸ್.ಆಚಾರ್ಯ-ಅಡುಗೆ ಅನಿಲ ರಹಿತ ಕುಟುಂಬಗಳಿಗೆ ಅನಿಲ ಸಂಪರ್ಕ ಪಡೆಯಲು ಸಹಾಯ ಧನ.<br>Financial Assistance to Domestic Gas Connection-Under V.S.Acharya Scheme. |

**3. ಹಿಂದುಳಿದ ಮತ್ತು ಅಲ್ಪ ಸಂಖ್ಯಾತರು ಹಾಗೂ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಮನೆ ನಿರ್ಮಾಣ**

**(ರೂ ಲಕ್ಷಗಳಲ್ಲಿ)**

| ಕ್ರ.ಸಂ | ಪಿ-ಕೋಡ್ | ಯೋಜನೆ | ಒಟ್ಟು |
|---|---|---|---|
| 1 | 2340 | ಹಿಂದುಳಿದ ಮತ್ತು ಅಲ್ಪ ಸಂಖ್ಯಾತರು ಹಾಗೂ ಆರ್ಥಿಕ ದುರ್ಬಲ ವರ್ಗದವರಿಗೆ ಮನೆ ನಿರ್ಮಾಣ | 1500.00 |

**ಕಾಮಗಾರಿ ವಿಭಾಗದ ಕಾರ್ಯಕ್ರಮಗಳು:-**

ಹಿಂದುಳಿದ ಮತ್ತು ಅಲ್ಪ ಸಂಖ್ಯಾತರು ಹಾಗೂ ಆರ್ಥಿಕವಾಗಿ ದುರ್ಬಲವರ್ಗದವರಿಗೆ ಮನೆಗಳ ನಿರ್ಮಾಣ ಪಿ-ಕೋಡ್2340:-

ಪಿ-ಕೋಡ್-2340 ರಡಿಯಲ್ಲಿ ರೂ.1500.00 ಲಕ್ಷಗಳ ಅನುಧಾನವನ್ನು ನಿಗದಿಪಡಿಸಿದ್ದು ಸದರಿ ಅನುಧಾನವನ್ನು ಈ ಕೆಳಕಂಡ ಕಾರ್ಯಕ್ರಮಗಳಿಗೆ ವಾರ್ಡ್‌ವಾರು ಪ್ರತಿ ಒಂಟಿ ಮನೆಫಲಾನುಭವಿಗೆ ರೂ.3.00ಲಕ್ಷಗಳ ಸಹಾಯಧನದ ಆದಾರದ ಮೇರೆಗೆ ಹಾಗು ಉಳಿದ

ಕಾರ್ಯಕ್ರಮಗಳಿಗೆ ನಿಯಮಾನುಸಾರ ಅಂದಾಜು ಮೇರೆಗೆ ವಾರ್ಡ್‌ವಾರು ಕಾಮಗಾರಿ ಕ್ರಿಯಾಯೋಜನೆಯನ್ನು ಸಿದ್ದಪಡಿಸಿ ಸಾ.ನ್ಯ.ಸ್ಥಾ.ಸಮಿತಿಯ ಅನುಮೋದನೆಯೊಂದಿಗೆ ಅನುಷ್ಠಾನಗೊಳಿಸುವುದು.

| ಕ್ರ.ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಹಿಂದುಳಿದ ಮತ್ತು ಅಲ್ಪ ಸಂಖ್ಯಾತರು ಹಾಗೂ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಪಕ್ಕಾ ಮನೆ ನಿರ್ಮಾಣ.<br>Individual House Construction |
| 2) | ಹಿಂದುಳಿದ ಮತ್ತು ಅಲ್ಪ ಸಂಖ್ಯಾತರು ಹಾಗೂ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಕಚ್ಚಾ ಮನೆ ನಿರ್ಮಾಣ.<br>Renovation of Houses |
| 3) | ವಿ.ಎಸ್.ಆಚಾರ್ಯ-ಅಡುಗೆ ಅನಿಲ ರಹಿತ ಕುಟುಂಬಗಳಿಗೆ ಅನಿಲ ಸಂಪರ್ಕ ಪಡೆಯಲು ಸಹಾಯ ಧನ ನೀಡುವುದು. |

ಆಯವ್ಯಯದಲ್ಲಿ ಮೇಲ್ಕಂಡ ಲೆಕ್ಕ ಶೀರ್ಷಿಕೆಗಳಡಿ(ಪಿ1878,ಪಿ2021,ಪಿ2340 & ಪಿ3071 ಗಳಡಿಯಲ್ಲಿ) ನಿಗಧಿಪಡಿಸಿರುವ ಚಾಲ್ತಿ ಅನುಧಾನಕ್ಕೆ ಸಂಬಂಧಿಸಿದಂತೆ ಪ್ರಧಾನ ಅಭಿಯಂತರರು ಕಾಮಗಾರಿ ವಿಭಾಗದಿಂದ ವಾರ್ಡ್‌ವಾರು ಪ್ರಸ್ತಾವನೆಗಳನ್ನು ಒಳಗೊಂಡ ವಲಯ ಕಾಮಗಾರಿ ಕ್ರಿಯಾಯೋಜನೆಯನ್ನು ಸಿದ್ದಪಡಿಸಿ ನಿಯಮಾನುಸಾರ ಮಾರ್ಗಸೂಚಿಗಳನ್ವಯ ಎಲ್ಲಾ ರೀತಿಯ ಕ್ರಮ ಕೈಗೊಂಡು ಸಾ.ನ್ಯ.ಸ್ಥಾ.ಸಮಿತಿಯ ಅನುಮೋದನೆ ಪಡೆದು ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು.

## 4. ಪಾಲಿಕೆ ವ್ಯಾಪ್ತಿಯಲ್ಲಿನ ನಗರ ಸಭೆ/ಪುರ ಸಭೆ ಪ್ರದೇಶದಲ್ಲಿನ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ:-

ಪಾಲಿಕೆ ವ್ಯಾಪ್ತಿಯಲ್ಲಿನ ನಗರ ಸಭೆ/ಪುರ ಸಭೆ ಪ್ರದೇಶದಲ್ಲಿನ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆಂದು ಲೆಕ್ಕಶಿರ್ಷಿಕೆ ಪಿ-3071ರಡಿ ರೂ.250.00 ಲಕ್ಷಗಳನ್ನು ಒದಗಿಸಿರುತ್ತಾರೆ. ಅದರಂತೆ ಹೊಸ 5 ವಲಯಗಳಾದ ಬೊಮ್ಮನಹಳ್ಳಿ-16 ವಾರ್ಡ್, ಮಹದೇವಪುರ-17 ವಾರ್ಡ್, ಯಲಹಂಕ-11 ವಾರ್ಡ್, ದಾಸರಹಳ್ಳಿ-8 ವಾರ್ಡ್, ರಾಜರಾಜೇಶ್ವರಿ ನಗರ-14 ವಾರ್ಡ್‌ಗಳು ಒಟ್ಟು 66 ವಾರ್ಡ್‌ಇದ್ದು ಸದರಿ ವಾರ್ಡ್‌ಗಳಿಗೆ ಹಂಚಿಕೆ ಮಾಡಬೇಕಾಗಿರುತ್ತದೆ.

**(ರೂ ಲಕ್ಷಗಳು)**

| ಕ್ರ.ಸಂ | ಪಿ-ಕೋಡ್ | ಕಾರ್ಯಕ್ರಮಗಳು | ಒಟ್ಟು |
|---|---|---|---|
| 1 | 3071 | ಪಾಲಿಕೆ ವ್ಯಾಪ್ತಿಯಲ್ಲಿನ ನಗರ ಸಭೆ/ಪುರ ಸಭೆ ಪ್ರದೇಶದಲ್ಲಿನ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ | 250.00 |

ಪಿ–ಕೋಡ್–3071 ರಡಿಯಲ್ಲಿ ರೂ.250.00 ಲಕ್ಷಗಳ ಅನುಧಾನವನ್ನು ನಿಗದಿಪಡಿಸಿದ್ದು ಮೇಲ್ಕಂಡ 66 ವಾರ್ಡ್‌ಗಳಿಗೆ ಸಮನಾಂತರವಾಗಿ ಹಂಚಿಕೆ ಮಾಡಬೇಕಾಗಿದ್ದು, ಸದರಿ ಅನುಧಾನವನಕ್ಕೆ ಕಾಮಗಾರಿ ಕ್ರಿಯಾಂಯೋಜನೆಯನ್ನು ಸಿದ್ದಪಡಿಸಿ ಸಾ.ನ್ಯ.ಸ್ಥಾ.ಸಮಿತಿಯ ಅನುಮೊದನೆಯೊಂದಿಗೆ ಅನುಷ್ಠಾನಗೊಳಿಸುವುದು.

**"ನಗರ ಪ್ರದೇಶದಲ್ಲಿನ ಕಡು ಬಡವರಿಗೆ ಮೂಲಭೂತ ಸೌಕರ್ಯಗಳ"** ಕಾರ್ಯಕ್ರಮ ಈ ಹಿಂದಿನ ಸಾಲಿನ ಆಯವ್ಯಯ ಪುಸ್ತಕಗಳಲ್ಲಿ ಜೆ.ಎನ್.ಎನ್.ಯು.ಆರ್.ಎಂ.ಕಾಮಗಾರಿಗಳು ವಿಭಾಗ ರವರಿಗೆ ನಮೂದಿಸಲಾಗಿತ್ತು. 2015–16ನೇ ಸಾಲಿನ ಆಯವ್ಯಯ ಪುಸ್ತಕದಲ್ಲಿ ಹೊಸದಾಗಿ ಸೇರಿಸಿರುವ ಪಿ–ಕೋಡ್ 3109ರಡಿಯಲ್ಲಿ ರೂ.2000.00 ಲಕ್ಷಗಳು ಅನುಧಾನವನ್ನು ನಗರ ಪ್ರದೇಶದಲ್ಲಿನ ಕಡು ಬಡವರಿಗೆ ಮೂಲಭೂತ ಸೌಕರ್ಯಗಳ ಹೊಂದಾಣಿಕೆ ಅನುದಾನದಡಿ ಕಾರ್ಯಕ್ರಮವನ್ನು ಕಲ್ಯಾಣ ಕಾರ್ಯಕ್ರಮಗಳಡಿ ನಮೂದಿಸಿರುವದರಿಂದ ಸದರಿ ಕಾರ್ಯಕ್ರಮವನ್ನು **ಜೆ.ಎನ್.ಎನ್.ಯು.ಆರ್.ಎಂ. ನಿಯಮಾನುಸಾರ ಈ ಕಾರ್ಯಕ್ರಮಕ್ಕೆ ರೂಪುರೇಷೆಗಳನ್ನು ಮತ್ತು ಮಾರ್ಗಸೂಚಿ ಹಾಗೂ ಅನುದಾನ ಹಂಚಿಕೆ ಮತ್ತು ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಬಿಎಸ್‌ಯುಪಿ/ಕಾಮಗಾರಿ ವಿಭಾಗದವರು ಪ್ರದಾನ ಅಭಿಯಂತರರು ಮತ್ತು ವಿಶೇಷ ಆಯುಕ್ತರು (ಯೋಜನೆ) ರವರ ಮುಕಾಂತರ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು.**

<u>ಕಲ್ಯಾಣಕಾರ್ಯಕ್ರಮಗಳ ಲೆಕ್ಕಶೀರ್ಷಿಕೆ ಪಿ–0224ರಡಿ ಪೌರಕಾರ್ಮಿಕರ, ಗ್ಯಾಂಗ್‌ಮೆನ್‌ಗಳ ಮತ್ತು ಮಾಲೀಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲು ರೂ.1.00 ಲಕ್ಷಗಳ</u> ಅನುದಾನವನ್ನು ಕಲ್ಯಾಣ ಶೀರ್ಷಿಕೆಯಲ್ಲಿ ನಿಗಧಿ ಪಡಿಸಲಾಗಿದ್ದು, ಇದುವರೆಗೆ ಸದರಿ ಶೀರ್ಷಿಕೆ ಶಿಕ್ಷಣ ಇಲಾಖೆಯ ಕಾರ್ಯಕ್ರಮದಡಿ ಅನುಷ್ಠಾನಗೊಳಿಸಲಾಗುತ್ತಿತ್ತು. ಕಾರಣ ಸದರಿ ಕಾರ್ಯಕ್ರಮವನ್ನು ಪಾಲಿಕೆಯ ವಿದ್ಯಾಧಿಕಾರಿಗಳು ಅನುಷ್ಠಾನಗೊಳಿಸಲು ಲೆಕ್ಕಶೀರ್ಷಿಕೆ ಪಿ0224 ರಡಿ ಪೌರಕಾರ್ಮಿಕರು/ಗ್ಯಾಂಗ್‌ಮೆನ್/ಮಾಲಿಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡುವ ಕಾರ್ಯಕ್ರಮವನ್ನು ಪಾಲಿಕೆಯ ಶಿಕ್ಷಣ ಇಲಾಖೆಯ ವಿದ್ಯಾಧಿಕಾರಿಯವರ ಮುಖಾಂತರ ಅನುಷ್ಠಾನಗೊಳಿಸುವುದು.

ಆಯುಕ್ತರು

## ವಸತಿ ನಿರ್ಮಾಣ/ಕಾಮಗಾರಿ

1. 2011ನೇ ಸಾಲಿನ ಜನಗಣತಿಯಂತೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಜನಸಂಖ್ಯೆ ಆಧಾರಿಸಿ ವಾರ್ಡ್‌ವಾರು ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ಜನಸಂಖ್ಯೆ ಅನುಗುಣವಾಗಿ, ವಾಡ್‌ಗಳಿಗೆ ಹಂಚಿಕೆ ಮಾಡುವ ಪ್ರಸ್ತಾವನೆಯನ್ನು ಸಾ.ನ್ಯ.ಸ್ಥಾ.ಸಮಿತಿಯ ಅನುಮೋದನೆಗೆ ನೇರವಾಗಿ ವಲಯ ಜಂಟಿ ಆಯುಕ್ತರು, ವಿಶೇಷ ಅಯುಕ್ತರು (ಯೋಜನೆ)ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

2. ವಲಯ ಕಛೇರಿಗಳಿಂದ ಸಲ್ಲಿಸಲಾಗಿರುವ ಕಾಮಗಾರಿ ಕ್ರಿಯಾಯೋಜನೆಗಳಿಗೆ ವಾರ್ಡ್‌ವಾರು ಅನುದಾನವನ್ನು ಸಂಬಂಧಪಟ್ಟ ಪಿ-ಕೋಡ್ ಅಡಿಯಲ್ಲಿ ಲಭ್ಯವಿರುವ ಚಾಲ್ತಿ ಅನುದಾನಕ್ಕೆ ಸೀಮಿತಗೊಳಿಸಿ ವಲಯ ಕಾಮಗಾರಿ ಕ್ರೀಯಾ ಯೋಜನೆಯನ್ನು ನಿಗಧಿಪಡಿಸಲಾಗಿರುವ ದಿನಾಂಕದೊಳಗೆ ಕಾಮಗಾರಿ ಶಾಖೆಯಿಂದ ಸಮುಚ್ಚಯ ಮಾರ್ಗದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಕಾರ್ಯಕ್ರಮಗಳನ್ನು/ಯೋಜನೆಗಳನ್ನು ನಿಯಮನುಸಾರ ಅನುಷ್ಠಾನಗೊಳಿಸುವುದು.

3. ಪಾಲಿಕೆಯಲ್ಲಿ ಹಾಲಿ ಜಾರಿಯಲ್ಲಿರುವ ಎಲ್ಲಾ ಮಾರ್ಗಸೂಚಿ ಮತ್ತು ಆದೇಶಗಳನ್ವಯ ವಲಯ ಕಛೇರಿಗಳಿಂದ ವಿವಿಧ ಕಲ್ಯಾಣ ಯೋಜನೆಗಳಡಿಯಲ್ಲಿ ಸಲ್ಲಿಸಲಾಗಿರುವ ಕಾಮಗಾರಿಗಳ ಪ್ರಸ್ತಾವನೆಯನ್ನು ವಿಶೇಷ ಅಯುಕ್ತರು (ಯೋಜನೆ)ರವರ ಮೂಲಕ ಪ್ರಧಾನ ಅಬಿಯಂತರರು ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನೊಂದಿಗೆ ಮಾನ್ಯ ಆಯುಕ್ತರ ಮುಖಾಂತರ ಮತ್ತು ಸ್ಥಾಯಿ ಸಮಿತಿಯನ್ನು ಅವೋದನೆಗಳಿಗಾಗಿ ಪ್ರಸ್ತಾವನೆಯನ್ನು ಮಂಡಿಸುವುದು.

4. ಜಾಬ್ ಸಂಕೇತ ಮತ್ತು ಅನುದಾನದ ಬಿಡುಗಡೆ ಮತ್ತು ಪಾವತಿ ಬಗ್ಗೆ ಲೆಕ್ಕ ಶಾಖೆಯಿಂದ ನಿಯಮನುಸಾರ ಮಾರ್ಗಸೂಚಿ ಅನ್ವಯ ಕ್ರಮವಹಿಸುವುದು.

5. ಕಾಮಗಾರಿ ಸಂಕೇತ ಬದಲಾವಣೆ, ವರ್ಗಾವಣೆ ಬದಲಿ ಫಲಾನುಭವಿಯ ಅನುಮೋದನೆ ಇತ್ಯಾದಿ ವಿಷಯಗಳ ಬಗ್ಗೆ ಹಲವಾರು ಕಡತಗಳು ಸಲ್ಲಿಕೆಯಾಗುತ್ತಿದ್ದು, ಮಾರ್ಗಸೂಚಿಯಲ್ಲಿ ಅವಕಾಶವಿರುವುದಿಲ್ಲ. ' ಕಾಮಗಾರಿ ಸಂಕೇತ ಹಾಗೂ ಮೇಲ್ಕಂಡ ಕ್ರಮದ ಬಗ್ಗೆ ನಿಯಮಾನುಸಾರ ಕಾಮಗಾರಿ ಶಾಖೆಯಿಂದ ಪರಿಶೀಲಿಸಿ ಮಾರ್ಗಸೂಚಿ ಅನ್ವಯ ಸಕ್ಷಮ ಪ್ರಾಧಿಕಾರದ ಅನುಮೋದನೆಗಾಗಿ ಲೆಕ್ಕಶಾಖೆಯಿಂದ ಮುಂದಿನ ಕ್ರಮ ವಹಿಸತಕ್ಕದ್ದು.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

6. ಮೂಲಭೂತ ಸೌಕರ್ಯಗಳು ಮತ್ತು ಮನೆ ನಿರ್ಮಾಣ ಕಮಗಾರಿ ವಿಷಯಗಳು ಸಂಪೂರ್ಣವಾಗಿ ಕಾಮಗಾರಿ ಶಾಖೆಗೆ ಸಂಬಂದಿಸಿದ್ದು, ಕಾಮಗಾರಿ ವಿಷಯಗಳ ಬಗ್ಗೆ ಅನುಸರಿಸಬೇಕಾದ ನಿಯಮ, ಮಾರ್ಗಸೂಚಿ, ಸರ್ಕಾರ ಮತ್ತು ಪಾಲಿಕೆಯ ಸುತ್ತೋಲೆಗಳನ್ವಯ ಅಭಿಯಂತರರು ತಾಂತ್ರಿಕ ಸಿಬ್ಬಂದಿ ಪರಿಶೀಲಿಸಿ ಕ್ರಮವಹಿಸತ್ಕದ್ದು.

## ಸಾಮಾನ್ಯ ಸೂಚನೆಗಳು

1) ಪ್ರಸ್ತುತ್ತ ಸಾಲಿನಲ್ಲಿ ಅನುಮೋದಿಸಿರುವ ಕಾರ್ಯಕ್ರಮಗಳನ್ನು ನಿಯಾಮಾನುಸಾರ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸುವುದು. ಕ್ರಿಯಾಯೋಜನೆಯಲ್ಲಿ ಅವಕಾಶವಿಲ್ಲದಿರುವ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಸ್ತಾವನೆ ಸಲ್ಲಿಕೆಯಾದ್ದಲ್ಲಿ ತಮ್ಮ ಹಂತದಲ್ಲಿಯೇ ತಿರಸ್ಕರಿಸುವುದು.

2) ಕೇಂದ್ರ ಕಛೇರಿಯಿಂದ ಹೊರಡಿಸಿರುವ ಮಾರ್ಗಸೂಚಿಗಳು/ಸುತ್ತೋಲೆಗಳು/ ಅಂತರಿಕ ಕಛೇರಿ ಟಿಪ್ಪಣಿ/ಕಛೇರಿ ಆದೇಶಗಳನ್ನು ಪಾಲಿಸುವುದು. ಕೇಂದ್ರ ಕಛೇರಿಗೆ ಕಲ್ಯಾಣ ಕಾರ್ಯಕ್ರಮಗಳ/ಕಾಮಗಾರಿಗಳ ಕಡತಗಳನ್ನು ಅನುಮೋದನೆಗೆ ಸಲ್ಲಿಸುವ ಸಮಯದಲ್ಲಿ ವಲಯ ಹಂತದ ಸಂಬಂದಪಟ್ಟ ಅಧಿಕಾರಿಗಳು ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಿ ತಮ್ಮ ಸ್ಪಷ್ಟ ಅಭಿಪ್ರಾಯ/ಶಿಫಾರಸ್ಸಿನೊಂದಿಗೆ ಕಡತ ಮಂಡಿಸುವುದು.

3) ಎಲ್ಲಾ ಕಲ್ಯಾಣ ಕಾರ್ಯಕ್ರಮಗಳಲ್ಲಿ ಕೆಟಿಪಿಪಿ ಆಕ್ಟ್ ಅಡಿಯಲ್ಲಿ ನಿಯಮನುಸಾರ ಟೆಂಡರ್ ಪ್ರಕ್ರಿಯೆ / ನೋಟಿಫಿಕೇಷನ್ ಮೂಲಕ ಎಲ್ಲಾ ಕಾರ್ಯಕ್ರಮಗಳಿಗೆ ಅರ್ಜಿಗಳನ್ನು ಕರೆಯಲು ಕ್ರಮ ತೆಗೆದುಕೊಳ್ಳುವುದು. ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಕೈಗೊಂಡು ಕಾರ್ಯಕ್ರಮ/ಯೋಜನೆಗಳನ್ನು ಅನುಷ್ಠಾನಗೊಳಿಸಲು ಎಲ್ಲಾರೀತಿಯ ಕ್ರಮ ವಹಿಸುವುದು.

**ಕಲ್ಯಾಣ ಕಾರ್ಯಕ್ರಮಗಳು ಹಾಗೂ ಶೇ.24.10 ರಡಿಯ ಕಾಮಗಾರಿಗಳನ್ನು ಶೀಘ್ರಗತಿಯಲ್ಲಿ ನಿಯಮಾನುಸಾರ ಅನುಷ್ಠಾನಗೊಳಿಸುವ ಸಂಬಂಧ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ವಲಯದ ಆಯುಕ್ತರುಗಳನ್ನು ಅನುಷ್ಠಾನಾಧಿಕಾರಿಗಳಾಗಿ ಹಾಗೂ ಉಪ ಆಯುಕ್ತರುಗಳನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ.**

**ಶೇ.24.10ರ ಅನುದಾನದಡಿಯಲ್ಲಿನ ಮನೆ ನಿರ್ಮಾಣ ಮತ್ತು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವಲಯದ ಮುಖ್ಯ ಅಭಿಯಂತರರನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದ್ದು, ಕೇಂದ್ರ ಕಛೇರಿಯಲ್ಲಿ ಪ್ರಧಾನ ಅಭಿಯಂತರರು ನಿಯಾಮಾನುಸಾರ ಎಲ್ಲಾ ರೀತಿಯ ಕ್ರಮ ವಹಿಸುವುದು.**

ಆಯುಕ್ತರು

ಪ್ರಗತಿಯನ್ನು ಪರಿಶೀಲಿಸಲು ಪ್ರತಿ ತಿಂಗಳು ವಿಶೇಷ ಆಯುಕ್ತರು (ಕಲ್ಯಾಣ) ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಗುವುದು, ಸದರಿ ಸಭೆಗೆ ವಲಯ ಅನುಷ್ಠಾನಾಧಿಕಾರಿಗಳು ಅಗತ್ಯ ಮಾಹಿತಿಯೊಂದಿಗೆ ಹಾಜರಾಗುವುದು. ಮಾಹೆಯಾನ ವಲಯವಾರು ಪ್ರಗತಿಯ ಮಾಹಿತಿಯನ್ನು ನಿಗಧಿತ ನಮೂನೆಗಳಲ್ಲಿ ವಲಯ ವ್ಯಾಪ್ತಿಯಲ್ಲಿ ಕ್ರೂಢಿಕರಿಸಿ ತಪ್ಪದೇ ಕೇಂದ್ರ ಕಛೇರಿಗೆ ಸಲ್ಲಿಸುವುದು ಹಾಗೂ ಪ್ರತಿ ಸಭೆಗೆ ಅಗತ್ಯ ಮಾಹಿತಿಯೊಂದಿಗೆ ಹಾಜರಾಗಲು ಸಹ ಸೂಚಿಸಿದೆ.

ಲಗತ್ತು:1) ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿಟ್ಟಿರುವ ಶೇ.24.10% ಅನುದಾನದ ವಾರ್ಡ್‌ವಾರು ಅನುಧಾನ,

2) ಹಿಂದುಳಿದ ಮತ್ತು ಅಲ್ಪ ಸಂಖ್ಯಾತರು ಹಾಗೂ ಆರ್ಥಿಕವಾಗಿ ದುರ್ಬಲ ವರ್ಗದವರ, ವಿಕಲಚೇತನರು, ಮಹಿಳೆ, ಸಾಮಾನ್ಯ ವರ್ಗದ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿಟ್ಟಿರುವ ಅನುದಾನದ ವಿವರ,

3) ಕಾಮಗಾರಿಗಳ ವಲಯವಾರು ಅನುದಾನದ ವಿವರ-3,

3ಎ) ಕಾಮಗಾರಿಗಳ ಪಿ-ಕೋಡ್ ವಾರು ಅನುದಾನದ ವಿವರ,

4) ವಾರ್ಡ್‌ವಾರು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ರವರ ಜನಸಂಖ್ಯೆ ವಿವರ, 2011ನೆ ಸಾಲಿನ ಜನಗಣತಿ ಆದಾರದ ಮೇರೆಗೆ.

**ಆಯುಕ್ತರು**

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ರವರಿಗೆ,**

1) ಪ್ರಧಾನ ಅಭಿಯಂತರರು ಕೇಂದ್ರ ಕಛೇರಿ,
2) ಅಪರ/ಜಂಟಿ ಆಯುಕ್ತರು, ಪೂರ್ವ/ಪಶ್ಚಿಮ/ದಕ್ಷಿಣ/ಬೊಮ್ಮನಹಳ್ಳಿ/ಯಲಹಂಕ /ಮಹದೇವಪುರ/ರಾಜರಾಜೇಶ್ವರಿನಗರ/ದಾಸರಹಳ್ಳಿ ವಲಯ,
3) ಮುಖ್ಯ ಅಭಿಯಂತರು ಪೂರ್ವ/ಪಶ್ಚಿಮ/ದಕ್ಷಿಣ/ಬೊಮ್ಮನಹಳ್ಳಿ/ಯಲಹಂಕ /ಮಹದೇವಪುರ/ರಾಜರಾಜೇಶ್ವರಿನಗರ/ದಾಸರಹಳ್ಳಿ ವಲಯ,
4) ವಿಶೇಷ ಆಯುಕ್ತರು(ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ, ಹಣಕಾಸು, ಯೋಜನೆ),
5) ವಿಧ್ಯಾದಿಕಾರಿ, ಬಿ.ಬಿ.ಎಂ.ಪಿ, ಜೆಸಿ ರಸ್ಥೆ, ಬೆಂಗಳೂರು
6) ಮುಖ್ಯ ಅಭಿಯಂತರು, ಬಿ.ಎಸ್.ಯು.ಪಿ, ಕೇಂದ್ರ ಕಛೇರಿ,

**ಪ್ರತಿಯನ್ನು:**

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಲಾಗಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಲಾಗಿದೆ.
3. ಮಾನ್ಯ ಆಯುಕ್ತರು/ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಲಾಗಿದೆ.

4. ಕೌನ್ಸಿಲ್ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರು, ವಿರೋದ ಪಕ್ಷದ ನಾಯಕರು ಹಾಗೂ ಆಡಳಿತ ಪಕ್ಷದ ನಾಯಕರಿಗೆ ಕಳುಹಿಸಲು ಕೋರಿದೆ.
5. ಮುಖ್ಯ ಲೆಕ್ಕಾಧಿಕಾರಿರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
6. ಮುಖ್ಯ ಆರ್ಥಿಕಾಧಿಕಾರಿಗಳು, ಕೇಂದ್ರ ಕಛೇರಿ
7. ಜಂಟಿ ಆಯುಕ್ತರು(ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ),
8. ಮುಖ್ಯ ಆರೋಗ್ಯಾಧಿಕಾರಿ, ಕೇಂದ್ರ ಕಛೇರಿ
9. ಕಛೇರಿ ಪ್ರತಿ